# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀಮತಿ ಉಮಾಶ್ರೀ<br>(ನಾಮ ನಿರ್ದೇಶನ ಹೊಂದಿದವರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 572 |
| 3 | ಉತ್ತರಿಸಬೇಕಾದ ದಿನಾಂಕ | : | 08-12-2023 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ (ಮನರೇಗಾ) ಕಾರ್ಮಿಕರಿಗೆ ನೀಡಬೇಕಾಗಿರುವ ಕೂಲಿ ಕಾರ್ಮಿಕರ ಹಣ ರೂ.34 ಕೋಟಿ ಹಾಗೂ ಸಾಮಗ್ರಿ ಬಿಲ್ ರೂ.410.75 ಕೋಟಿ ಒಟ್ಟು 444 ಕೋಟಿ ರೂ. ಬಾಕಿ ಇರುವುದು ನಿಜವೇ; | 2023-24 ನೇ ಸಾಲಿಗೆ ನರೇಗಾ ಯೋಜನೆಯಡಿ ನಿರ್ವಹಿಸಿದ ಕಾಮಗಾರಿಗಳಿಗೆ ಕೂಲಿ ರೂ. 406.74 ಕೋಟಿಗಳು ಮತ್ತು ಸಾಮಾಗ್ರಿ ರೂ. 497.67 ಕೋಟಿಗಳು ಒಟ್ಟಾರೆ ರೂ. 904.42 ಕೋಟಿಗಳು ಬಾಕಿ ಇದ್ದು, ಬಾಕಿ ಇರುವ ಅನುದಾನದ ವಿವರವನ್ನು ಜಿಲ್ಲಾವಾರು ಅನುಬಂಧ-1 & 2 ಅನ್ನು ಲಗತ್ತಿಸಿದೆ. |
| ಆ) | ಹಾಗಿದ್ದಲ್ಲಿ, ಸರ್ಕಾರ ಇಷ್ಟು ಮೊತ್ತದ ಬಾಕಿ ಹಣವನ್ನು ಯಾವ ಕಾಲಮಿತಿಯಲ್ಲಿ ಪಾವತಿಸಲು ಕ್ರಮಕೈಗೊಳ್ಳುವುದು; ಹಾಗೂ ಬಾಕಿ ಉಳಿಸಿಕೊಳ್ಳಲು ಇರುವ ಕಾರಣಗಳೇನು; | ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸಾಮಗ್ರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75:25 ರ ಅನುಪಾತದಂತೆ ಅನುದಾನ ಬಿಡುಗಡೆ ಗೊಳಿಸಲಾಗುತ್ತಿದೆ. ನರೇಗಾ ಯೋಜನೆಯ ಕೂಲಿಗೆ ಸಂಬಂಧಿಸಿದ ಅನುದಾನವನ್ನು ಪರಿಪೂರ್ಣವಾಗಿ ಕೇಂದ್ರ ಸರ್ಕಾರವೇ ಭರಿಸುತ್ತಿದ್ದು, ನೇರವಾಗಿ ಫಲಾನುಭವಿಗಳಿಗೆ DBT ಮೂಲಕ ಜಮೆಯಾಗುತ್ತಿರುತ್ತದೆ. ಕೂಲಿ ಮೊತ್ತಕ್ಕೆ ಸಂಬಂಧಿಸಿದಂತೆ, ನವೆಂಬರ್ 2023ರ ಮಾಹೆಯಲ್ಲಿ ಕೇಂದ್ರ ಸರ್ಕಾರದಿಂದ ರೂ. 511 ಕೋಟಿಗಳ ಕೂಲಿ ಮೊತ್ತ ಬಿಡುಗಡೆಯಾಗಿದ್ದು, ಹಿಂದಿನ ತಿಂಗಳುಗಳಲ್ಲಿ ಬಾಕಿಯಿದ್ದ ಕೂಲಿಗೆ ಜಮೆಯಾಗಿರುತ್ತದೆ. ಪ್ರಸ್ತುತ, ದಿನಾಂಕ: 18.10.2023ರಿಂದ ಕೂಲಿ ಮೊತ್ತ ಪಾವತಿಗೆ ಬಾಕಿಯಿರುತ್ತದೆ.<br>ಯೋಜನೆಯಡಿ ಬಾಕಿಯಿರುವ ಒಟ್ಟು ಸಾಮಗ್ರಿ ಮೊತ್ತ ರೂ. 497.67 ಕೋಟಿಗೆ ಸಂಬಂಧಿಸಿದಂತೆ ಈಗಾಗಲೇ ರೂ.423.87 ಕೋಟಿಗಳು SNA ಖಾತೆಯಲ್ಲಿ ಸಾಮಾಗ್ರಿ ಮೊತ್ತ ಲಭ್ಯವಿದ್ದು, ಗ್ರಾಮ ಪಂಚಾಯತಿ ಮತ್ತು ಅನುಷ್ಠಾನ ಇಲಾಖೆಗಳಿಗೆ FTO ಸೃಜನೆಗೆ ಅವಕಾಶ ಕಲ್ಪಿಸಿದ್ದು, ಅನುದಾನ ಬಿಡುಗಡೆಗೆ ಜಿಲ್ಲಾ ಪಂಚಾಯತಿಯಿಂದ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ಆಯುಕ್ತಾಲಯದಿಂದ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುವುದು. |

(50) set

| | | |
|---|---|---|
| ಇ) | ಬಾಕಿ ಹಣವನ್ನು ಎಷ್ಟು ಕೂಲಿಕಾರರಿಗೆ ನೀಡಬೇಕಾಗಿದೆ; ಅನುದಾನದ ಕೊರತೆಯಿಂದ ಹಣ ಬಿಡುಗಡೆಯಾಗಿಲ್ಲ ಎಂಬ ಉತ್ತರವನ್ನು ಕೆಲವು ಅಧಿಕಾರಿಗಳು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೂಲಿಕಾರ್ಮಿಕರಿಗೆ ಹಣ ಯಾವಾಗ ಪಾವತಿಸಲಾಗುವುದು? | ನರೇಗಾ ಯೋಜನೆಯ ಕೂಲಿಗೆ ಸಂಬಂಧಿಸಿದ ಅನುದಾನವನ್ನು ಪರಿಪೂರ್ಣವಾಗಿ ಕೇಂದ್ರ ಸರ್ಕಾರವೇ ಭರಿಸುತ್ತಿದ್ದು, ಫಲಾನುಭವಿಗಳಿಗೆ ನೇರವಾಗಿ DBT ಖಾತೆಗೆ ಜಮೆಯಾಗುತ್ತಿದೆ. ರಾಜ್ಯ ಸರ್ಕಾರವು ಕಾಲಕಾಲಕ್ಕೆ ಕೂಲಿ ಮೊತ್ತಕ್ಕೆ ಸಂಬಂಧಿಸಿದ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು, ಅನುದಾನ ಬಿಡುಗಡೆಗೆ ಕ್ರಮಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಗ್ರಾಅಪ/608/ಉಖಾಯೋ/2023 (ಇ-1246410)**

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು